ಕುಳಿತಿದ್ದ ವಾರ್ಡನ್ ಯಾರೊಂದಿಗೋ ಮಾತನಾಡುತ್ತಿದ್ದರು. ಮೀರಾ ಮತ್ತು ಮಾನಸಿ ಬಂದು ನಿಂತಾಗ ವಾರ್ಡನ್, 'ಇದೇನು? ಇಷ್ಟು ಹೊತ್ತಿನಲ್ಲಿ? ಎನಿ ಪ್ರಾಬ್ಲಮ್?' ಎಂದು ಕೇಳಿದರು.

ಮೊದಲು ಹಿಂಜರಿದು ನಿಂತರೂ ವಿಷಯವನ್ನು ಹೇಳಲೇಬೇಕಾಗಿರುವುದರಿಂದ, ಮಾನಸಿ ಮುಂದೆ ಬಂದು, 'ಮೇಡಂ... ಸಾಕ್ಷಿ ಶನಿವಾರದಿಂದ ಇದುವರೆಗೂ ಹಾಸ್ಟೆಲಿಗೆ ಬಂದೇ ಇಲ್ಲ. ಫೋನ್ ಮಾಡಿದರೆ ಬೆಳಗ್ಗೆಯಿಂದ ಸ್ವಿಚ್ ಆಫ್ ಅಂತಾ ಬರ್‍ತಾ ಇದೆ...' ಹೇಳಲು ಆರಂಭಿಸಿದಳು.

'ಅಂದರೆ?' ಚಕಿತರಾಗಿ ಕೇಳಿದರು ವಾರ್ಡನ್.

ಮಾನಸಿ ಎಲ್ಲ ವಿವರವನ್ನೂ ಹೇಳಿದಳು. ಡಾಕ್ಟರ್ ಶಿವಾನಂದ ಹೇಳಿದ ವಿಷಯ ಮತ್ತು ಅವನ ವಿಷಯ ಹೇಳಲಿಲ್ಲ. ತನ್ನತ್ತ ಪ್ರಶ್ನಾರ್ಥಕವಾಗಿ ನೋಡಿದ ಮೀರಾಳಿಗೆ ಕಣ್ಣು ಸನ್ನೆಯಿಂದಲೇ ಸುಮ್ಮನಿರುವಂತೆ ಸೂಚಿಸಿದ ಮಾನಸಿ, 'ಇದುವರೆಗೂ ಎಂದೂ ಹಾಸ್ಟೆಲಿಗೆ ಲೇಟಾಗಿ ಬಂದವಳೇ ಅಲ್ಲ. ಪರೀಕ್ಷೆಯಿರುವುದರಿಂದ ಲೈಬ್ರರಿ ಬಿಟ್ಟರೆ ಬೇರೆಲ್ಲಿಗೂ ಹೋಗುತ್ತಿರಲಿಲ್ಲ...' ಹೇಳಿದಳು.

'ಊರಿಗೇನಾದರೂ ಹೋಗಿರಬಹುದಾ?' ವಾರ್ಡನ್ ಕೇಳಿದರು.

'ನಮಗೂ ಅದೇ ಅನುಮಾನ ಬಂದಿತ್ತು. ಅವಳ ತಾಯಿಗೆ ಫೋನ್ ಮಾಡ್ಬೇಕೂಂತ ಅಂದ್ಕೊಂಡೆವು. ಬೆಳಗ್ಗೆ ಮಾಡಿದರಾಯ್ತೂಂತ ಮೊದಲು ನಿಮಗೆ ತಿಳಿಸಲು ಬಂದೆವು.' ಎಂದಳು ಮಾನಸಿ.

ವಾರ್ಡನ್ ಅವರಿಗೆ ಸಿಟ್ಟು ಬಂದಿತು. 'ನನ್ನ ಹತ್ತಿರ ಬರೋಕೆ ನಿಮಗೆ ಮೂರು ದಿನಗಳು ಬೇಕಾಯ್ತಾ? ನನ್ನ ಮನೆ ಅಷ್ಟು ದೂರವೇನಿಲ್ಲಾಂತ ಅಂದ್ಕೊಂಡಿದ್ದೀನಿ...' ಎಂದರು. ಸಿಟ್ಟನ್ನು ಮಾನಸಿಯ ಮೇಲೆ ತೋರಿಸಿದರು. 'ಸಾಕ್ಷಿಯ ಮನೆ ನಂಬರ್ ಇದ್ರೆ ಕೊಡಿ' ಎಂದರು ಮುಖ ಗಂಟಿಕ್ಕಿ.

ಮೀರಾ ತನ್ನ ಮೊಬೈಲ್‌ನಲ್ಲಿದ್ದ ಸಾಕ್ಷಿಯ ಮನೆಯ ಫೋನ್ ನಂಬರನ್ನು ವಾರ್ಡನ್ ಅವರಿಗೆ ಕೊಟ್ಟಳು. ವಾರ್ಡನ್ ಸಾಕ್ಷಿಯ ಮನೆಗೆ ಫೋನ್ ಮಾಡಿದರು.

'ಹಲೋ...'

'.....'

'ನಾನು ವಾರ್ಡನ್ ಮಾತಾಡ್ತಾ ಇದ್ದೀನಿ. ಸಾಕ್ಷಿ ಅಲ್ಲಿಗೇನಾದರೂ ಬಂದಿದ್ದಾಳೆಯೇ?'

'.....'

'ಮತ್ತೆಲ್ಲಿಗೆ ಹೋಗಿರಬಹುದು?'

'.....'

'ಮೂರು ದಿನಗಳಿಂದ ನಿಮ್ಮ ಮಗಳು ಹಾಸ್ಟೆಲಿಗೆ ಬಂದಿಲ್ಲ. ಅವಳ ರೂಮೇಟ್ಸ್ ಈಗ ಬಂದು ಹೇಳುತ್ತಿದ್ದಾರೆ. ಎಲ್ಲಾ ಕಡೆಯೂ ಅಂದರೆ ಸಾಕ್ಷಿಯ ಗೊತ್ತಿರೋರಿಗೆಲ್ಲಾ ಫೋನ್ ಮಾಡಿದರೂ ಸುಳಿವು ಸಿಗಲಿಲ್ಲ. ಇದನ್ನು ತಿಳಿಸುವುದು ನಮ್ಮ ಕರ್ತವ್ಯ ಅದಕ್ಕೆ ಹೇಳ್ತಾಯಿದ್ದೀನಿ..'

'.....'

'ಅಳುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಗಾಬರಿಯಾಗಬೇಡಿ. ನಾಳೇನೇ ಕಾಲೇಜಿನ ಪ್ರಿನ್ಸಿಪಾಲ್ ಅವರ ಆಫೀಸಿನ ಹತ್ತಿರ ಬಂದು ಬಿಡಿ. ನಿಮಗೆ ಗೊತ್ತಿರೋರ ಮನೆಗೆ ಸಾಕ್ಷಿ ಹೋಗಿದ್ದಾಳೆಯೇ ಅಂತಾನೂ ಖಚಿತಪಡಿಸಿಕೊಂಡು ಬನ್ನಿ... ಗಾಬರಿಯಾಗಬೇಡಿ. ನಾವಿದ್ದೇವೆ... ಬಂದು ಬಿಡಿ...'

'.....'

'ಸರಿ...' ಎಂದು ವಾರ್ಡನ್ ಮೊಬೈಲ್ ಕೆಳಗಿಟ್ಟು ಕುಳಿತರು. ಅವರ ಗಂಭೀರವಾದ ಮುಖ ನೋಡಿ